**ಇಂದು ದಿನಾಂಕ:*24.10.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ.ಬಿ.ಎಂ.ಕೆ. ವಕೀಲರಿಂದಃ**

ದಾವಾ ಐಟಂ ನಂಬರ್ 3 ರಿಂದ 15 ಹಾಗೂ 20 ರಿಂದ 26 ರ ಆಸ್ತಿಗಳೆಲ್ಲವೂ ವಾದಿಗಳ ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿ. ಈಗ ಹೇಳಿದ ಎಲ್ಲಾ ಆಸ್ತಿಗಳನ್ನು ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿ ಅವುಗಳನ್ನೆಲ್ಲ ಇತ್ತೀಚೆಗೆ ತೆಗೆದುಕೊಂಡಿದ್ದೇವೆ. ದಾವಾ ಐಟಂ ನಂಬರ್ 3 ರ ಆಸ್ತಿಯನ್ನು ಕೃಷ್ಣಮೂರ್ತಿ ಮತ್ತು ಮಲ್ಲೇಗೌಡರಿಂದ 25 ವರ್ಷಗಳ ಹಿಂದೆ ಖರೀದಿಸಿದ್ದೇನೆ. ಸ.ನಂ.288 ರಲ್ಲಿ 1 ಎಕರೆಯನ್ನು ಖರೀದಿಸಿದ್ದೇನೆ. ನನ್ನ ಸಹೋದರರು ಯಾವ ಯಾವ ಸರ್ವೆ ನಂಬರ್ ಗಳನ್ನು ಖರೀದಿಸಿದ್ದಾರೆ ಎಂದು ಗೊತ್ತಿಲ್ಲ. ನಾನು ಖರೀದಿಸಿರುವ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ ಅದು ಬ್ಯಾಂಕ್ ನಲ್ಲಿದೆ. ದಾವಾ ಐಟಂ ನಂಬರ್ 3 ರ ಆಸ್ತಿಯನ್ನು ವಿಭಾಗವಾದ ನಂತರ ಖರೀದಿಸಿದ ಬಗ್ಗೆ ನಮ್ಮ ವಕೀಲರಿಗೆ ತಿಳಿಸಿದ್ದೇನೆ. ದಾವಾ ಐಟಂ ನಂಬರ್ 11 ಮತ್ತು 12 ರ ಆಸ್ತಿಗಳನ್ನು ನಮ್ಮ ತಂದೆ 2006 ರಲ್ಲಿ ಹೊನ್ನಾಪುರ ಗ್ರಾಮದ ಹೆಗ್ಗಪ್ಪರವರಿಗೆ ಭೋಗ್ಯ ಮಾಡಿದ್ದರು ಎಂದರೆ ಸರಿ. ಸದರಿ ಭೋಗ್ಯವನ್ನು ಯಾವಾಗ ಬಿಡುಗಡೆ ಮಾಡಿಸಿಕೊಳ್ಳಲಾಗಿದೆ ಎಂದು ಗೊತ್ತಿಲ್ಲ. ಭೋಗ್ಯ ಮಾಡಿದ್ದ ಆಸ್ತಿಗಳನ್ನು ವಿಭಾಗ ಪತ್ರದಲ್ಲಿ ಸೇರಿಸಲಾಗಿದೆಯೇ ಎಂದರೆ ಗೊತ್ತಿಲ್ಲ. 2009 ರಲ್ಲಿ ನಾನು ಮತ್ತು ನನ್ನ ತಂದೆ ಹಾಗೂ ಸಹೋದರರೆಲ್ಲರೂ ಸೇರಿ ಭೋಗ್ಯ ಬಿಡುಗಡೆ ಮಾಡಿಸಿಕೊಂಡಿದ್ದೇವೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಬದುಕಿದ್ದಾಗ ಆರೋಗ್ಯವಾಗಿದ್ದರು ಅವರೇ ಮನೆ ವ್ಯವಹಾರ ಮಾಡುತ್ತಿದ್ದರು. ವಿಭಾಗ ಪತ್ರ ಮಾಡಿಕೊಂಡ ತಾರೀಖು, ತಿಂಗಳು ಮತ್ತು ಇಸವಿ ಗೊತ್ತಿಲ್ಲ. ವಿಭಾಗ ಪತ್ರ ಮಾಡುವಾಗ ನಮ್ಮ ಅಕ್ಕ ತಂಗಿಯರು ಮತ್ತು ಅಣ್ಣ ತಮ್ಮಂದಿರು ಮತ್ತು

ತಂದೆ ಸೇರಿ ಮಾತನಾಡಿಕೊಂಡು ವಿಭಾಗ ಮಾಡಿಕೊಂಡಿದ್ದೇವೆ. ವಿಭಾಗ ಪತ್ರವನ್ನು ನಮ್ಮ ತಂದೆ ಬರೆಸಿ ಸಿದ್ದಪಡಿಸಿದ್ದರು.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**